ಶ್ರೀ ಎಚ್. ಗಂಗಾಧರನ್.—ಕೆ. ಆರ್. ಎಸ್ ಬಲದಂಡೆ ನಾಲೆಯ ಯೋಜನೆಯು ಜೊತೆಗೆ ವಿಶ್ವೇಶ್ವರಯ್ಯ ನಾಲೆಯನ್ನು ರಿಪೇರಿ ಮಾಡತಕ್ಕಂಥ ಯೋಜನೆಯನ್ನು ಸೇರಿಸಿ ಎರಡು ಕೋಟಿ ಅರವತ್ತೈರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಹೇಳಿರುತ್ತೀರಿ. ಕೆ.ಆರ್.ಎಸ್. ನಾಲೆ ತೋಡುವುದಕ್ಕೆ ಮಾತ್ರ ಖರ್ಚುಮಾಡುವ ಹಾಗಿದ್ದರೆ ಎಷ್ಟು ಮೈಲಿಗಳಷ್ಟು ನಾಲೆಯನ್ನು ತೋಡಿದ್ದೀರಿ

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ವರುಣಾ ನಾಲೆ ಸುಮಾರು ಟೋಟಲ್ ಲೆನ್ತ್ ೧೩೫ ಕಿಲೋ ಮಿಾಟರ್ ತೋಡಬೇಕೆಂದು ಇರುತ್ತದೆ. ಇದರಲ್ಲಿ ಈಗಾಗಲೇ ೨೬ ಕಿಲೋ ಮಿಾಟರ್‌ಗಳಷ್ಟು ಟ್ರಾಕಲ್ ಮಾಡುವುದಕ್ಕೋಸ್ಕರವಾಗಿ ಎರಡು ಕೋಟಿ ಅರವತ್ತೈರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ಡಿ. ಜಯದೇವರಾಜ ಅರಸ್.—೨೬ ಕಿಲೋ ಮಿಾಟರ್ ದೂರ ನಾಲೆಯನ್ನು ತೋಡುವ ಸಲುವಾಗಿ ಟೆಂಡರನ್ನು ಕರೆದು, ಟೆಂಡರನ್ನು ತೀರ್ಮಾನ ಮಾಡಿರುವುದಾಗಿ ತಿಳಿದುಬಂದಿರುತ್ತದೆ. ಆಕ್ಸೆಪ್ಟ್ ಆಗಿರುವ ಟೆಂಡರ್ ೨ ಕೋಟಿ ೧೦ ಲಕ್ಷ ರೂಪಾಯಿಗಳು. ಕೆಲಸವನ್ನು ಆರಂಭಿಸದೆ, ಹೀಗೆಯೇ ಮುಂದಕ್ಕೆ ಬಿಟ್ಟುಕೊಂಡು ಹೋಗುತ್ತಿದ್ದರೆ ಮುಂದೆ ೪–೫ ಕೋಟಿ ರೂಪಾಯಿಗಳು ಆಗಬಹುದು. ಆದುದರಿಂದ ಇದನ್ನು ಕೂಡಲೇ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸರ್ಕಾರದ ಮುಖ್ಯ ಅಭಿಯಂತರವರಿಂದ ಶಿಫಾರಸು ಬಂದಿರುತ್ತದೆ. ಅದನ್ನು ಕೂಡಲೇ ಕಾರ್ಯಗತ ಮಾಡುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.—ಈಗಾಗಲೇ ೨೯೫ ಎಕರೆ ಭೂಮಿಯನ್ನು ವಶಪಡಿಸಿಕೊಂಡು ಕ್ರಾಪ್ ಕಾಂಪನ್‌ಸೆಷನ್ ಕೊಡಲು ಒಪ್ಪಿಗೆಯನ್ನು ಕೊಟ್ಟಿದ್ದೇವೆಂದು ಹೇಳಿರುತ್ತೀರಿ. ೨–೩–೪–೫ ಎಕರೆ ಜಮೀನನ್ನು ಕಳೆದುಕೊಂಡಂಥ ಜಮೀನುದಾರರು ನಮ್ಮ ನಂಬಿಕೆಯ ಮೇಲೆ ಜಮೀನನ್ನು ಕೊಟ್ಟಿರುತ್ತಾರೆ. ಅವರಿಗೆ ಕ್ರಾಪ್ ಕಾಂಪನ್‌ಸೆಷನ್ ಕೊಟ್ಟಿಲ್ಲ. ಕೊಡದೆ ಹೋದರೆ ಅವರು ಜೀವನ ಮಾಡುವುದೇ ಕಷ್ಟವಾಗುತ್ತದೆ. ಅವರಿಗೆ ಹಣವನ್ನು ಏನು ಕೊಡಬೇಕಾಗಿರುತ್ತದೆ ಅದರಲ್ಲಿ ಕೊನೆ ಪಕ್ಷ ೭೫ ಪರ್ಸೆಂಟ್ ಹಣವನ್ನಾದರೂ ಕೊಡುವಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ ಈಗಾಗಲೇ ಸುಮಾರು ೩೦ ಕಿಲೋಮಿಾಟರ್ ಗಳಷ್ಟು ಜಮೀನುದಾರರಿಗೆ ಕಾಂಪನ್‌ಸೆಷನ್ ಕೊಟ್ಟಿರುತ್ತದೆ. ಇನ್ನು ೧೦೫ ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಕೆಲಸ ಮಾಡುತ್ತಿರುತ್ತಾರೆ. ಅದಷ್ಟು ಬೇಗ ಅವರಿಗೂ ಪೇಮೆಂಟ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಅದರ ಜೊತೆಗೆ ಒಪ್ಪಿಗೆ ಕೊಟ್ಟಿರತಕ್ಕಂಥ ಸುಮಾರು ಎಲ್ಲ ರೈತರಿಗೂ ಅನುಕೂಲವಾಗುವ ರೀತಿಯಲ್ಲಿ ಕ್ರಾಪ್ ಕಾಂಪನ್‌ಸೆಷನ್ ಈಗಾಗಲೇ ಕೊಟ್ಟಿದ್ದೇವೆ. ೨೯೫ ಎಕರೆಗೆ ಸುಮಾರು ೮೪ ಸಾವಿರದ ೩೧೫ ರೂಪಾಯಿ ಗಳಷ್ಟು ಕಾಂಪನ್‌ಸೆಷನ್ ಕೊಡುವುದಕ್ಕೆ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ರವರಿಂದ ಡಿಮ್ಯಾಂಡ್ ಇದೆ. ಅದನ್ನೂ ಕೂಡ ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ ಈಗಾಗಲೇ ರಾಜ್ಯಪಾಲರ ಭಾಷಣದಲ್ಲಿ ಮೂವತ್ತು ಕೋಟಿ ರೂಪಾಯಿಗಳನ್ನು ಕಾವೇರಿ ಬೇಸಿನ್‌ಗಾಗಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ವರುಣಾ ನಾಲೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ, ಮತ್ತು ಈ ವರ್ಷ ಕ್ಯಾಬಿನೆಟ್ ಡಿಸಿಷನ್ ಪ್ರಕಾರ ಎಷ್ಟು ಮಂಜೂರಾಗಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮೂರು ಕೋಟಿ ರೂಪಾಯಿಗಳು ಮಂಜೂರಾಗಿರುತ್ತದೆ.

Construction of Roads and Bridges in Dharwad.

727. SRI BHAVU RAO DESHPANDE (Dharwad).—Will the Minister for Public Work be pleased to state:—

(a) the number of villages where there are no roads to go from one place to another place by bus in Dharwad taluk;

(b) the number of pits which are obstructing communication due to non-construction of bridges ;

(c) whether the Government have taken up any schemes to form roads and to construct bridges?

SRI KAGODU THIMMAPPA (Minister for Public Works).—

(a) Ten Villages.

(b) Eight Pits.

(c) Schemes are being under taken for construction of roads and bridges based on economic condition.

ಶ್ರೀ ಭಾವೂರಾವ್ ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ ಧಾರವಾಡ ತಾಲ್ಲೂಕು ಹಳ್ಳಿಗಳಿಗೆ ರಸ್ತೆಗಳನ್ನು ಕೊಡುವುದಕ್ಕೆ ಮತ್ತು ಸೇತುವೆಗಳನ್ನು ಕಟ್ಟುವುದಕ್ಕೆ ಕಳೆದ ಮೂರು ವರ್ಷಗಳಲ್ಲಿ ಎಷ್ಟೆಷ್ಟು ಹಳ್ಳಿಗಳಿಗೆ ರಸ್ತೆಗಳನ್ನು ಮತ್ತು ಸೇತುವೆಗಳನ್ನು ಕೊಟ್ಟಿದ್ದೀರಿ ಎಂದು ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕಳೆದ ಮೂರು ವರ್ಷಗಳಲ್ಲಿ ಅಗತ್ಯವಾಗಿ ಎಷ್ಟು ಹಳ್ಳಿಗಳಿಗೆ ರಸ್ತೆಗಳನ್ನು ಸೇತುವೆಗಳನ್ನು ಕಟ್ಟಲು ಸಾಧ್ಯವೋ ಅಷ್ಟನ್ನು ಕೊಟ್ಟಿರುತ್ತೇವೆ. ಉಳಿದ ೧೦ ಹಳ್ಳಿಗಳಿಗೆ ಯಾವಾಗ ರಸ್ತೆ ಮಾಡುತ್ತೀರಿ ಎನ್ನುವ ಪ್ರಶ್ನೆಯನ್ನು ಕೇಳಿದ್ದೀರಿ. ಅದನ್ನು ನಾನಂ ಈಗಾಗಲೇ ಹೇಳಿದ್ದೇನೆ. ಮಾಸ್ಟರ್ ಪ್ಲಾನ್ ತಯಾರಾಗಿದೆ. ಆರ್ಥಿಕ ಮುಗ್ಗಟ್ಟಿನಿಂದ ಕೆಲಸ ನಿಲ್ಲಿಸಲಾಗಿರುತ್ತದೆ, ಇನ್ನು ಸ್ವಲ್ಪ ದಿವಸಗಳಲ್ಲಿಯೇ ಹಣವನ್ನು ಬಿಡುಗಡೆ ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ರಸ್ತೆ ಮತ್ತು ಸೇತುವೆಗಳ ಕೆಲಸವನ್ನು ಕೈಗೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ನಮಗಿರತಕ್ಕಂಥ ಉದ್ದೇಶವೇನೆಂದರೆ ಕಳೆದ ೫-೬ ವರ್ಷಗಳಲ್ಲಿ ಒಂದು ಹಳ್ಳಿಗೂ ಒಂದು ರಸ್ತೆಯನ್ನಾಗಲಿ ಅಥವಾ ಒಂದು ಸೇತುವೆಯನ್ನಾಗಲಿ ಕೊಟ್ಟಿಲ್ಲ. ಈ ವರ್ಷದ ಬಜೆಟ್‌ನಲ್ಲಿಯಾದರೂ ಸೇತುವೆ ಮತ್ತು ರಸ್ತೆಗಳಿಗೆ ಮಂಜೂರಾತಿ ಇದೆಯೇ ? ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಮಂಜೂರು ಮಾಡಿರುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ ಈಗಾಗಲೇ ೧೦ ಹಳ್ಳಿಗಳಿಗೆ ಮಾತ್ರ ರಸ್ತೆಗಳ ನಿರ್ಮಾಣ ಕಾರ್ಯವನ್ನು ಕೈಗೊಂಡಿಲ್ಲ. ಮಾರ್ಜಿನ್‌ನೊಳಗೆ ಮಾಡಲು ಒಂದು ಮಾಸ್ಟರ್ ಪ್ಲಾನ್ ಮಾಡಿದ್ದೇವೆ. ಕೆಲಸವನ್ನು ಪರಿಶೀಲಿಸಿ ಹಣವನ್ನು ಒದಗಿಸಿ ಅಷ್ಟು ಹಳ್ಳಿಗಳಿಗೂ ರಸ್ತೆಗಳನ್ನು ಮಾಡುವುದಾಗುತ್ತದೆ.

ಶ್ರೀ ಭಾವೂರಾವ್ ದೇಶಪಾಂಡೆ.—ಧಾರವಾಡ ಒಂದು ವ್ಯವಸಾಯ ಕೇಂದ್ರವಾಗಿರುತ್ತದೆ. ಸುಮಾರು ಮೂರು ನಾಲ್ಕು ಮೈಲಿ ದೂರದಿಂದ ವ್ಯಾಪಾರಕ್ಕಾಗಿ ಜನರು ಬರುತ್ತಾರೆ, ಮತ್ತು ಉದ್ಯೋಗಕ್ಕಾಗಿಯೂ ಕೂಡ ಹಳ್ಳಿಗಳಿಂದ ಬರತಕ್ಕಂಥ ಜನರು ಇರುತ್ತಾರೆ. ಹಳ್ಳಿಗಳಿಂದ ಬರಲು ಸೇತುವೆಗಳಿಲ್ಲದಿರುವುದರಿಂದ ಬಸ್‌ಗಳ ಸಂಚಾರಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸೇತುವೆಗಳನ್ನು ಕೊಡಲು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೆ ಹೇಳಿದ್ದೇನೆ. ಎಂಟು ಹಳ್ಳಿಗಳಿಗೆ ಸೇತುವೆ ಮಾರ್ಗಗಳು ಇಲ್ಲದಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ ಮುಂದಿನ ವರ್ಷ ಎಷ್ಟು ಸೇತುವೆಗಳನ್ನು ಹೆಗಿದುಕೊಳ್ಳಬೇಕೆಂಬುದು ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿದೆ. ಒಂದೆರಡು ಸೇತುವೆ ಮತ್ತು ರಸ್ತೆಗಳ ನಿರ್ಮಾಣ ಕಾರ್ಯವನ್ನು ಸೇರಿಸಿಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈ ಪ್ರಶ್ನೆಯಲ್ಲಿ (ಅ) ಎನ್ನುವ ಪ್ರಶ್ನೆಯ ಭಾಷಾಂತರವು ತಪ್ಪಾಗಿರುತ್ತದೆ. ಅದು ಸೇತುವೆ ಮತ್ತು ರಸ್ತೆಗಳು ಇಲ್ಲದೆ ಇರುವುದರಿಂದ ಸಂಚಾರಕ್ಕೆ ಅಡ್ಡಿ ಬುನ್ನುಂಟು ಮಾಡುತ್ತಿರುವ ಹಳ್ಳಿಗಳೆಷ್ಟು ಎಂದು ಇರಬೇಕಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕನ್ನಡದಲ್ಲಿ ಉತ್ತರವನ್ನು ಸರಿಯಾಗಿಯೇ ಕೊಟ್ಟಿರುತ್ತೇನೆ.

MR. SPEAKER.—Question hour is over.